ಬೆಸ್ತರ ಹುಡುಗಿ ನಾನು. ಮೀನು ಹಿಡಿಯುವ ಕುಟುಂಬದಲ್ಲಿ ಹುಟ್ಟಿ, ಮೀನು ಬುಟ್ಟಿ ಹಿಡಿಯುವ ಬದಲು ಕೊರಳಲ್ಲಿ ಸ್ಟೆತಾಸ್ಕೋಪ್, ಕೈಯಲ್ಲಿ ಸಿರಿಂಜ್ ಹಿಡಿಯುವಂತಾದ್ದು ಯಾವ ಜನ್ಮದ ಪುಣ್ಯವೋ ಏನೋ ಎಂದು ಒಮ್ಮೊಮ್ಮೆ ನನಗೆ ನಾನೇ ಹೇಳಿಕೊಂಡು ಅಚ್ಚರಿಯಿಂದ ಹಿಗ್ಗುತ್ತೇನೆ' ಎಂದು ನಡೆದುಹೋಗಿದ್ದಳು. ಚಹಾ ಕುಡಿದು ಅಣ್ಣ ವಿಕ್ರಮ್ ರೆಡ್ಡಿಗೆ ಫೋನ್ ಮಾಡಿದ್ದೆ. ಅಣ್ಣನ ಧ್ವನಿ ಸ್ವಲ್ಪ ಕ್ಷೀಣಿಸಿದಂತೆ ಕಂಡಬರುತ್ತಿತ್ತು. 'ಏಕಣ್ಣ, ಹುಷಾರಿಲ್ಲವಾ?' ಕೇಳಿದ್ದೆ. 'ಮಸ್ಸೂರಿಯಿಂದ ಇಲ್ಲಿಗೆ ಕಾರಿನಲ್ಲಿ ಬಂದೆನಲ್ಲ, ಸ್ವಲ್ಪ ಅಲರ್ಜಿ ಆಗಿದೆಯೆನಿಸುತ್ತದೆ. ನೀನು ದೆಹಲಿಯಲ್ಲಿಯೇ ಇದ್ದೀಯಾ?' ಕೇಳಿದ್ದರು ಅಣ್ಣ ವಿಕ್ರಮ್ ರೆಡ್ಡಿ. 'ನಾನು ಜಸ್ಟ್ ಮಸ್ಸೂರಿಗೆ ಬಂದೆ ಸ್ನೇಹಿತರ ಜತೆಯಲ್ಲಿ. ಪ್ರಸಿದ್ಧ ಸಾಹಿತಿ ರಸ್ಕಿನ್ ಬಾಂಡ್ ಇಲ್ಲೇ ಇರೋದು. ಪುಸ್ತಕದ ಅಂಗಡಿ ಇಟ್ಟುಕೊಂಡಿದ್ದಾರೆ. ನನಗೆ ಇಷ್ಟವಾದ ಸಾಹಿತಿ. ಹಾಗಾಗಿ ಭೇಟಿಯಾಗಿ, ಮಾತನಾಡಿಸಿಕೊಂಡು ಹೋಗೋಣ ಅಂತ. ಸಾಧ್ಯವಾದರೆ ನಾಳೆ ಮಧ್ಯಾಹ್ನ ಇಲ್ಲಿಂದ ಹೊರಟು ರಾತ್ರಿಗೆ ದಿಲ್ಲಿ ಸೇರ್ತೀನಿ' ಎಂದಿದ್ದೆ. 'ಓಹ್ ಗೊತ್ತು, ನಾನು ಮಸ್ಸೂರಿಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಅಡ್ಮಿನಿಸ್ಟ್ರೇಶನ್ ಸೆಂಟರ್‌ನಲ್ಲಿದ್ದಾಗ ಒಂದೆರಡು ಸಾರಿ ನೋಡಿದ್ದೆ. ನಾಡಿದ್ದು ಬೆಳಿಗ್ಗೆ ನಾನು ದಿಲ್ಲಿಗೆ ಬರ್ತೀನಿ. ಸಂಜೆ ಏಳು ಗಂಟೆಯ ಹೊತ್ತಿಗೆ ಮನೆಗೆ ಬಂದುಬಿಡು' ಎಂದು ಅಣ್ಣ ವಿಕ್ರಮ್ ರೆಡ್ಡಿ ಫೋನ್ ಕಟ್ ಮಾಡಿದ್ದ.

ಕರುತ್ತಮ್ಮ ನೀಡಿದ ಚಹಾದ ರುಚಿಯನ್ನು ಸವಿಯುತ್ತಾ ನಂಬರ್ ಒನ್ ಕೊಠಡಿ ಕಡೆಗೆ ಹೋಗಲು ಸಿದ್ಧನಾಗುತ್ತಿರುವಾಗ ಫೋನ್ ರಿಂಗಾಗಿತ್ತು. ನಾನು ಊಹಿಸಿದಂತೆ ಅದು ರಾಘವರೆಡ್ಡಿಯ ಕರೆಯಾಗಿತ್ತು. 'ಹಲೋ' ಎಂದಿದ್ದೆ. 'ಬ್ರದರ್ ಅಮೃತಸರದಲ್ಲಿದ್ದೀಯಾ?' ಕೇಳಿದ್ದ. ದುಗುಡ ತುಂಬಿದ ಧ್ವನಿ. 'ಇಲ್ಲ, ನಾನು ಇವೊತ್ತು ಸಡನ್ನಾಗಿ ಪ್ರೋಗ್ರಾಂ ಚೇಂಜ್ ಮಾಡಿಬಿಟ್ಟೆ. ಅಮೃತಸರಕ್ಕೆ ಹೋಗೋ ಬದಲು ಮಸ್ಸೂರಿಗೆ ಬಂದು ಬಿಟ್ಟೆ. ಅಣ್ಣನನ್ನು ಇಲ್ಲೇ ಭೇಟಿಯಾಗೋಣ ಅಂತ ಬಂದೆ, ಆದರೆ ಅವರು ಅರ್ಜೆಂಟ್ ಆಫೀಸ್ ಕೆಲಸದ ಮೇಲೆ ಇವೊತ್ತು ಬೆಳಿಗ್ಗೆ ನೈನಿತಾಲಿಗೆ ಹೋಗಿಬಿಟ್ಟಿದ್ದಾರೆ' ಎಂದು ಅರ್ಧ ಸತ್ಯ, ಅರ್ಧ ಸುಳ್ಳು ಹೇಳಿದ್ದೆ.

'ನಿಮ್ಮ ಎಕ್ಸ್ ಎನರ್ಜಿ ಮಿನಿಸ್ಟರ್ ರಾಮ್ ಗೋಪಾಲ್‌ನನ್ನು ಇವೊತ್ತು ಸಂಜೆ ಐದು ಗಂಟೇಲಿ ಸಿಬಿಐನವರು ಸಖತ್ತಾಗಿ ಬೆಂಡೆತ್ತಿದರಂತೆ. ಎಲ್ಲವನ್ನೂ ಬಾಯಿಬಿಟ್ಟಿದ್ದಾನೆ ಅಂತ ಮಾಧ್ಯಮದವರು ಒಂದೇ ಸಮನೆ ಬಡೆದುಕೊಳ್ತಿದ್ದಾರೆ. ಒಂದು ಮೂಲದ ಪ್ರಕಾರ ಅಣ್ಣ ಸತ್ಯನಾರಾಯಣಡುವಿನ ಹೆಸರನ್ನೂ ಹೇಳಿದ್ದಾನೆಂಬ ಬಲವಾದ ಸುದ್ದಿ ಇದೆ. ಆಡಳಿತ ಪಕ್ಷದ ಎಂಪಿಯೂ, ಫೇಮಸ್ ಸುಪ್ರೀಂ ಕೋರ್ಟ್ ಅಡ್ವೋಕೇಟ್ ಆಗಿರುವ ಯಾದವ್ ಎಂಬುವವರನ್ನು ಭೇಟಿಯಾಗಿದ್ವಿ. ಉತ್ತರ ಭಾರತದವರು, ತುಂಬಾ ಪ್ರಾಮಾಣಿಕ ರಾಜಕಾರಣಿಯಂತೆ, ತನ್ನ ಸೃಷ್ಟಿ ಮತ್ತು ಬದುಕಿಗೆ ಕಾರಣವಾದ ಪಂಚಭೂತಗಳನ್ನೇ ಇಂದು ಮನುಷ್ಯ ಸರಕುಗಳನ್ನಾಗಿ ಬಳಸಿಕೊಂಡು ಲಾಭ ಗಳಿಸಲು ಹೊರಟಿದ್ದಾನೆ. ಹಾಗಾಗಿ ಇಡೀ ಪ್ರಕೃತಿ ಮನುಷ್ಯ ಪ್ರಾಣಿಯನ್ನು ನೆಮ್ಮದಿ ಯಿಂದ ಇರದಂತೆ ನೋಡಿಕೊಳ್ಳುತ್ತಿದೆ. ಜಗತ್ತಿನ ಪ್ರತಿಯೊಬ್ಬರಿಗೆ ಸಮಾನವಾಗಿ ಲಭ್ಯವಾಗಬೇಕಾಗಿರುವ ಸೂರ್ಯನ ಶಾಖವನ್ನೇ ಲಾಭಕ್ಕಾಗಿ ಕದ್ದರೆ, ಅದರ ಪ್ರತಿಫಲವನ್ನು ಅನುಭವಿಸಬೇಕಾಗುತ್ತದೆ ಎಂದು ಯಾದವ್ ಅರ್ಧ ಗಂಟೆ ಅಣ್ಣ ಸತ್ಯನಾರಾಯಣಡುಗೂ ನನಗೂ ಚೆನ್ನಾಗಿ ಉಗಿದ. ಆತನ ಒಂದೊಂದು ಮಾತೂ ಎಷ್ಟೊಂದು ತೂಕವಿತ್ತು ಗೊತ್ತಾ? ಎಲ್ಲವನ್ನೂ ಬಿಟ್ಟು ಹಿಮಾಲಯದ ಕಡೆಗೆ ಓಡಿ ಹೋಗಬೇಕೆನಿಸಿತ್ತು ಕ್ಷಣ. ಒಂದು ವೇಳೆ ಅಣ್ಣನಿಗೆ ತೊಂದರೆಯಾದರೆ ತಾವು ಕೇಸನ್ನು ಹ್ಯಾಂಡಲ್ ಮಾಡುವುದಾಗಿ ಕಡೆಗೆ ಒಪ್ಪಿಕೊಂಡಿದ್ದಾರೆ. ಈ ಕೇಸಿನಿಂದ ಪಾರಾದರೆ ಅನ್ನಾವರಂನ ಸತ್ಯನಾರಾಯಣ ಸ್ವಾಮಿಗೆ ಒಂದೊಂದು ಕೇಜಿಯ ಐದು ಚಿನ್ನದ ನಂದಾದೀಪಗಳನ್ನು ಕೊಡುವುದಾಗಿ ಅಣ್ಣ ಸತ್ಯನಾರಾಯಣಡು ಹರಕೆಯನ್ನು ಕೂಡಾ ಕಟ್ಟಿಕೊಂಡಿದ್ದಾರೆ. ಕೆ.ಎಮ್. ನಯ್ಯಾರ್ ಆಚೆ ನಾಡಿದ್ದು ದೆಹಲಿಗೆ ಬರುತ್ತಾರಂತೆ. ಕೇರಳದಲ್ಲಿ ಏನೇನೋ ಪೊಲಿಟಿಕಲ್ ಹೈಡ್ರಾಮಗಳು ಬಹು ಬಿರುಸಿನಿಂದ ನಡೆಯುತ್ತಿವೆಯಂತೆ. ರೂಲಿಂಗ್ ಪಾರ್ಟಿಯ ಮತ್ತು ಅಪೊಸಿಷನ್ ಪಾರ್ಟಿಯ ಸುಮಾರು ಎಂಎಲ್‌ಎಗಳು ಕೆ.ಎಮ್. ನಯ್ಯಾರ ರನ್ನು ಮುಖ್ಯಮಂತ್ರಿ ಮಾಡಲು ಸಂಚು ಹೆಣೆಯು ತ್ತಿದ್ದಾರಂತೆ. ಅಲ್ಲಿನ ಎಂಪಿಯೊಬ್ಬರು ಸಂಜೆ ಆಂಧ್ರ ಭವನದಲ್ಲಿ ಸಿಕ್ಕಿದ್ದರು. ಅವರೇ ಈ ವಿಷಯವನ್ನು ಹೇಳಿದ್ದು. ಪ್ರವಾಹ ಬಂದು ಕೆ.ಎಮ್. ನಯ್ಯಾರರ ನಸೀಬು ಖುಲಾಯಿಸಿದಂತೆ ಕಾಣುತ್ತಿದೆ. ಇರಲಿ, ನಮ್ಮವರಿಗೆ ಒಳ್ಳೆಯದಾದರೆ ನಮಗೆ ಒಳ್ಳೆಯದಾದಂತೆ ಅಲ್ಲವೆ?'

ರಾಘವರೆಡ್ಡಿ ಮಾಮೂಲಿಯಾಗಿ ಭಾಷಣ ಬಿಗಿಯುವಂತೆ ಮಾತನಾಡಿದ್ದ. 'ಅಂಥ ತೊಂದರೆ ಯೇನೂ ಆಗಲಾರದು ಅನ್ನಿಸುತ್ತದೆ. ನೀವು ಸಮಾಧಾನದಿಂದಿರಿ. ನಾನು ನಾಡಿದ್ದು ದಿಲ್ಲಿಗೆ ಬರುತ್ತೇನೆ. ಅಂಥ ಸಂದರ್ಭ ಬಂದರೆ ಅಣ್ಣ ವಿಕ್ರಮ್ ರೆಡ್ಡಿಯವರ ಜೊತೆ ಮಾತನಾಡ್ತೀನಿ ಮತ್ತು ಕೆ.ಎಮ್. ನಯ್ಯಾರರ ವಿಷಯದಲ್ಲಿ ಆಗುತ್ತಿರುವ ಬೆಳವಣಿಗೆ ತುಂಬಾ ಒಳ್ಳೆಯದೇ ಆಯಿತು' ಎಂದು ಸಮಾಧಾನದ ಮಾತುಗಳನ್ನು ಆಡಿದ್ದೆ. ರಾಘವರೆಡ್ಡಿಯ ಜೊತೆ ಮಾತನಾಡಿದ ಮೇಲೆ ನನ್ನ ಕೊಠಡಿಯ ಬಾಗಿಲನ್ನು ಮುಚ್ಚಿ ನಂಬರ್ ಒನ್ ಸ್ಯೂಟ್ ಕಡೆ ನಡೆದಿದ್ದೆ. ಸ್ಯೂಟ್‌ನ ಬಾಗಿಲು ಮುಚ್ಚಿತ್ತು. ಬಾಗಿಲು ತಟ್ಟಿದ್ದೆ. ಸ್ವಲ್ಪ ಸಮಯದ ನಂತರ ಬಾಗಿಲು ತೆರೆದುಕೊಂಡಿತ್ತು. ತೆರೆದ ಬಾಗಿಲಿನಲ್ಲಿ ಸಿಂಧೂ ಮೆನನ್ ನಿಂತಿದ್ದಳು. 'ಬನ್ನಿ' ಎಂದು ಸ್ವಾಗತಿಸಿದ್ದಳು. ಅದೊಂದು ತುಂಬಾ ವಿಶಾಲವಾದ ಕೊಠಡಿಯಾಗಿತ್ತು. ಮೂರು ಐಷಾರಾಮಿ ಮಂಚಗಳು ಮತ್ತು ಎರಡು ಲೆದರ್ ಸೋಫಾ ಸೆಟ್ಟುಗಳು. ಗೋಡೆಯ ಎರಡೂ ಕಡೆ ಎರಡು ಅಗ್ಗಿಷ್ಟಿಕೆಗಳು. ಅವುಗಳಲ್ಲಿ ಸಣ್ಣಗೆ ಉರಿಯುತ್ತಿದ್ದ ಸೌದೆಯ ತುಂಡುಗಳಿಂದ ಹೊರಬರುತ್ತಿದ್ದ ಘಮ್ಮನೆಯ ತೆಳುವಾದ ಸುವಾಸನೆ. ಬಹುಶಃ ಅಗ್ಗಿಷ್ಟಿಕೆಗಳಲ್ಲಿ ಉರಿಯುತ್ತಿದ್ದದ್ದು ಗಂಧದ ಸೌದೆ ತುಂಡುಗಳೇ ಇದ್ದಿರಬೇಕು. ನಾನು ಸೋಫಾದ ಮೇಲೆ ಕುಳಿತಿದ್ದೆ. ಮಧ್ಯದ ಮಂಚದ ಮೇಲೆ ಮೆತ್ತನೆಯ ಹೊದಿಕೆಯನ್ನು ತಲೆಯನ್ನು ಹೊರತುಪಡಿಸಿ ಶರೀರದ ತುಂಬಾ ಹೊದ್ದು ಮಲಗಿದ್ದ ಸುಮಾರು ಇಪ್ಪತ್ತು ವರ್ಷ ಇರಬಹುದಾದ ಯುವತಿ ಮಲಗಿದ್ದಳು. ಪಕ್ಕದ ಮಂಚದ ಮೇಲೆ ಡಾಕ್ಟರ್ ಆಮ್ರಪಾಲಿ ಕುಳಿತಿದ್ದರು. ಆಕೆಯನ್ನು ವಿಡಿಯೋ ಕಾನ್ಫರೆನ್ಸ್‌ನಲ್ಲಿ ಈಗಾಗಲೇ ನೋಡಿದ್ದರಿಂದ ಗುರುತು ಹಿಡಿದಿದ್ದೆ. ಸರಳವಾಗಿದ್ದರೂ ತುಂಬಾ ಸುಂದರಿಯಂತೆ ಕಾಣುತ್ತಿದ್ದರು. 'ಸಿಂಧೂ ನಿಮ್ಮ ಬಗ್ಗೆ ಹೇಳಿದ್ದಾಳೆ. ಅರುಂಧತಿಯನ್ನು ಕಳೆದುಕೊಂಡಿದ್ದು ನಿಜಕ್ಕೂ ನಮ್ಮಿಬ್ಬರಿಗಾದ ಜೀವಮಾನದ ನಷ್ಟವೇ ಸರಿ. ಆದರೆ ಸಾವಿನ ಲಕ್ಷಣವೇ ಹಾಗೆ. ನಮ್ಮಿಂದ ಇಲ್ಲವಾದ ಸಂಗತಿಗಳು ಒಂದಷ್ಟು ದಿನ ನಮ್ಮನ್ನು ಬಹಳವಾಗಿ ಕಾಡುತ್ತವೆ. ಕ್ರಮೇಣ ಕಾಡುವಿಕೆಯ ಸಾಂದ್ರತೆ ಕಡಿಮೆಯಾಗಿ ಅಪ್ರಜ್ಞಾವಸ್ಥೆಯಲ್ಲಿ ಇರುವ ಮೆದುಳಿನ ಯಾವುದೋ ಭಾಗದಲ್ಲಿ ಬಿದ್ದುಕೊಂಡಿರುತ್ತವೆ. ನೀವೂ ಕೂಡಾ ಸೈಕಾಲಜಿ ವಿದ್ಯಾರ್ಥಿಯಂತಲ್ಲ, ಹಾಗಾಗಿ ನಿಮಗೆ ಈ ಸಂಗತಿಗಳು ಹೊಸವೇನೂ ಆಗಿರಲಿಕ್ಕಿಲ್ಲ. ಆದರೆ ಒಬ್ಬ ಡಾಕ್ಟರಾಗಿ ನನಗೆ ಅನುಭವಕ್ಕೆ ಬಂದಿರುವಂತೆ ಮನುಷ್ಯನ ಮನಸ್ಸು ಎಲ್ಲಾ ಅಧ್ಯಯನಗಳಿಗೂ ಮೀರಿದ್ದು. ಏಕೆಂದರೆ ನಾವು ಯಾವುದೇ ಅಧ್ಯಯನವನ್ನು ಮೊದಲು ಕಟ್ಟುತ್ತಾ ಹೋಗುವುದು **hypothesis**ಗಳ ಮೇಲೆಯೇ. ಅದಿರಲಿ, ಊಟಕ್ಕೆ ಏನು ತೆಗೆದು ಕೊಳ್ಳುತ್ತೀರಿ?' ಎಂದ ಆಮ್ರಪಾಲಿಯವರ ಕಂಠ ಅತ್ಯಂತ ಮಧುರವಾಗಿದ್ದು ಚಿಕಿತ್ಸಾತ್ಮಕ ಗುಣವನ್ನು ಹೊಂದಿತ್ತು.

'ನೀವೇನು ಊಟ ಮಾಡುತ್ತೀರೋ ನನಗೂ ಅದೇ ಸಾಕು. ವೈದ್ಯರಾದವರೆಲ್ಲಲ್ಲ ನಿಮ್ಮಂತೆ ಧ್ವನಿಯಿದ್ದರೆ ಬಹುಶಃ ಅರ್ಧ ಕಾಯಿಲೆ ಮಾತುಗಳು ಕಿವಿಯ ಮೇಲೆ ಬಿದ್ದ ಕೂಡಲೆ ವಾಸಿಯಾಗಿಬಿಡುತ್ತದೆ. ನಿಮ್ಮ ಧ್ವನಿಯಲ್ಲಿ ಎಂಥ ಸಮ್ಮೋಹನ ಶಕ್ತಿ ತುಂಬಿದೆ ಗೊತ್ತಾ? ನಿಮ್ಮನ್ನು ಮೆಚ್ಚಿಸಲೇನೂ ನಾನೀ ಮಾತುಗಳನ್ನು ಆಡುತ್ತಿಲ್ಲ ಡಾಕ್ಟರ್' ಎಂದಿದ್ದೆ. 'ಹೌದು. ಗಾಳಿ, ನೀರು, ಬೆಳಕಿಗೆ ಇದ್ದಂತೆ ಧ್ವನಿಗೂ ಸೃಷ್ಟಿಯಲ್ಲಿ ಅದ್ಭುತವಾದ ಶಕ್ತಿಯಿದೆ. ಧ್ವನಿ ಇಲ್ಲದೆ ಸೃಷ್ಟಿಗೆ ಕಿಂಚಿತ್ತೂ ಚೈತನ್ಯ ವಿರಲಾರದು. ಸೃಷ್ಟಿಯ ಯಾವುದೇ ಸಂಗತಿಯ ಬಗ್ಗೆ ನಾವು ಯೋಚಿಸುತ್ತಾ ಹೋದರೂ ನಾವೊಂದು ತಾತ್ವಿಕ ಕೊನೆಯನ್ನು ತಲುಪಲು ಸಾಧ್ಯವೇ ಆಗುವುದಿಲ್ಲ. ಅವೆಲ್ಲವೂ ಒತ್ತಟ್ಟಿಗಿರಲಿ, ಡ್ರಿಂಕ್ಸ್ ಏನಾದರೂ ತಗೋತೀರಾ? ವಿಸ್ಕಿ, ವೈನ್, ಬಿಯರ್ ಎಲ್ಲವೂ ಲಭ್ಯವಿದೆ. ಇವೊತ್ತು ಊಟ ಅರ್ಬನ್ ಟರ್ಬನ್ ರೆಸ್ಟೋರೆಂಟ್‌ನಿಂದ ಬರಲಿದೆ' ಎಂದಿದ್ದರು ಡಾಕ್ಟರ್ ಆಮ್ರಪಾಲಿ. 'ಚಳಿ ಇರುವುದ ರಿಂದ ಒಂದೆರಡು ಪೆಗ್ ವಿಸ್ಕಿ ಆದರೆ ಆದೀತು' ಎಂದಿದ್ದೆ. (ಸಶೇಷ)